	ಪೌಂಡುಗಳು.		ಪೌಂಡುಗಳು.
ರಾಗಿ ..	346,340	ಯಳ್ಳೆಂಣೆ ..	2,361
ಅಕ್ಕಿ ..	78,471	ಉಪ್ಪು ..	10,417
ತೊಗರಿ ಅಥವಾ ಅವರೆ	52,083	ಮಸಾಲೆ ಪುಡಿ ..	7,986
ತರಕಾರಿ ..	104,161	ಈರುಳ್ಳಿ ..	10,417
ಮೊಸರು ..	23,612	ಸಾಬೆ ..	416,667
ತುಪ್ಪ ..	2,361		

9. ಸೂಪರ್ಟೆಂಡೆಂಟರವರು, ಯಾವ ದರಖಾಸ್ತನ್ನಾಗಲಿ ಕಾರಣವನ್ನು ತಿಳಿಸದೇಯೇ ನಿರಾಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವೈಶಿಸಿಕೊಂಡು ಯಿರುತ್ತಾರೆ.

10. ಮಂಜೂರಾದ ದರಖಾಸ್ತುದಾರನ ತೇವಣೀ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು ಅವನು ಗುತ್ತಿಗೇಚೀಟು ಬರದುಕೊಡಲಿಕ್ಕಾಗಲಿ ತನ್ನ ಗುತ್ತಿಗೆ ಮಂಜೂರಾದ್ದು ತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತ್ತು ಒಂದು ವಾರದೊಳಗಾಗಿ ನಗದಾಗಿ ಯೂ ಗವರ್ಮೆಂಟ್ ಪತ್ರಗಳ ಮೂಲಕ 1,500 ರೂಪಾಯಿಗಳಿಗೆ ಜಾಮೀರ್ ಕೊಡಲಿಕ್ಕಾಗಲಿ ತಪ್ಪಿದರೆ ಸದರೀ ತೇವಣೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸ್ ಯಾವದೂ ಕೊಡಲ್ಪಡಲಾರದು: ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗಾಗಿ ಮೊಬಲಗುಗಳು ಪ್ರತಿ ತಿಂಗಳ 1ನೇ ತಾರೀಖಿಗೆ ತರುವಾಯ ಕೂಡಿದಷ್ಟು ತ್ವರೆಯಾಗಿ ಸೆಂಟ್ರಲ್ ಜೈಲ್ ಸೂಪರ್ಟೆಂಡೆಂಟರಿಂದ ಸಲ್ಲಿಸಲ್ಪಡುವದು.

12. ಕಂಟ್ರಾಕ್ಟುದಾರನಿಗೆ ಉಗ್ರಾಣದ ಬಗ್ಗೆ ಒಂದು ಖೋಲೆಯು ಕೊಡಲ್ಪಡುವದು. ಅದರಲ್ಲಿ ನಷ್ಟವಾಗದೇ ಯಿರುವ ದರೋಬಸ್ತು ಪದಾರ್ಥಗಳನ್ನೂ ಅವನು ಯಿಟ್ಟುಕೊಳ್ಳಬಹುದು, ಮೊಸರ ವಗೈರೆ ನಷ್ಟವಾಗತಕ್ಕ ಪದಾರ್ಥಗಳು ಪ್ರತಿ ದಿವಸ ಬೆಳಿಗ್ಯೆ 8 ಘಂಟೆಯೊಳಗೆ ಜೈಲಿಗೆ ಬಂದಿರತಕ್ಕದ್ದು.

13. ಕಂಟ್ರಾಕ್ಟು ವಳಗೇಣಿಗೆ ಕೊಡಲ್ಪಡಕೂಡದು.

14. ಕಂಟ್ರಾಕ್ಟಿನ ನಿಬಂಧನೆಗಳ ಬಾಬತು ಯಾವ ಅತಿಕ್ರಮಕ್ಕಾಗಲಿ, ಯಾವದಾದರೂ ಹಲ್ಕೀ ಪದಾರ್ಥಗಳ ಸರಬರಾಯಿ ಬಗ್ಯಾಗಲಿ, ಸೆಂಟ್ರಲ್ ಜೈಲ್ ಸೂಪರ್ಟೆಂಡೆಂಟರ ಯಖ್ತ್ಯಾರೀ ಮೇಲೆ 150 ರೂಪಾಯಿಗಳಿಗೆ ಮಿರಢ ಒಂದು ಜುರ್ಮಾನೆ ವಸೂಲ್ ಮಾಡಲ್ಪಡುವದು, ಬಾರ್‌ಬಾರ್ ಅತಿಕ್ರಮ ನಡೆಸಿದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀರ್ ಮೊಬಲಗು ಸರಕಾರಕ್ಕೆ ತೆಗದುಕೊಳ್ಳಲ್ಪಡುವದು.

15. ಕಂಟ್ರಾಕ್ಟಿನ ಅತಿಕ್ರಮಕ್ಕೆ ಸಂಬಂಧಿಸಿದ ದರೋಬಸ್ತು ಸಂಗತಿಗಳಲ್ಲಿಯೂ ಸೆಂಟ್ರಲ್ ಜೈಲ್ ಸೂಪರ್ಟೆಂಡೆಂಟರ ತೀರ್ಮಾನವು ಅಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು ಕಂಟ್ರಾಕ್ಟಿನ ದರದ ಪ್ರಕಾರವೇ ಖೈದೀಗಳ ಉಪಯೋಗಕ್ಕೊಸ್ತರ ಜೈಲ್ ತೋಟದಿಂದ ಕಾಯಿಪಲ್ಲೆಗಳನ್ನು ಕೊಂಡು ಕೊಳ್ಳಬೇಕು.

17. ಹೆಚ್ಚಿಗೇ ಸಂಗತಿ ಯಾವದಾದರೂ ತಿಳಕೊಳ್ಳಬೇಕಾದರೆ ಸೂಪರ್ಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳತಕ್ಕದ್ದು.

18. ಈ ಕಂಟ್ರಾಕ್ಟು ಮೈಸೂರು ಸೀಮೆಯಲ್ಲಿನ ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

ಜೆ. ಹೆಡರ್ಸ್ಟ್,
ಸೂಪರ್ಟೆಂಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 463.

ಮೃತಪಟ್ಟ ಶಿದ್ದರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಥೋಂಜೋಜೆಯು, ಮೃತಪಟ್ಟ ಸದರೀ ಶಿದ್ದರಾಮಯ್ಯನಿಗೆ ಸೋದರ ಮಾವನಮಗ ಆಗಬೇಕೆಂಬ ಹಕ್ಕುದಾರೀ ಮೇಲೆ

ಮೈಸೂರು ಬಸವನ ಮೊಹಲ್ಲಾ ಸ್ಥಳದ ಸದರೀ ಥೋಂಜೋಜೆಯು ಸದರೀ ವಾಸಸ್ಥನಾಗಿ ಮೃತಪಟ್ಟ ಶಿದ್ದರಾಮಯ್ಯನ ಜಿಂದಗಿ ಬಗ್ಯಾಗಿ

ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಧೋಂಡೋಬಯ ಅರ್ಜೀಯನ್ನು 1885ನೇ ಇಸವಿ ಜನವರೀ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 477.

ಮೃತಪಟ್ಟ ಶ್ರೀಕಂಠಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತಿಮಪ್ಪ ಮೈನರ್, ಗಾರ್ಡಿಯರ್ ವೆಂಕಮ್ಮ, ಮೃತಪಟ್ಟ ಸದರೀ ಶ್ರೀಕಂಠಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರಮಕೂಡ್ಲು ನರಸೀಪುರ ತಾಲ್ಲೂಕು ಬನ್ನೂರು ಸ್ಥಳದ ಸದರೀ ತಿಮಪ್ಪ ಮೈನರ್, ಗಾರ್ಡಿಯರ್ ವೆಂಕಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಶ್ರೀಕಂಠಯ್ಯನ ಜಿಂದಗಿಬಗ್ಯಾಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ತಿಮಪ್ಪ ಮೈನರ್, ಗಾರ್ಡಿಯರ್ ವೆಂಕಮ್ಮನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 478.

ಮೃತಪಟ್ಟ ಸಂಜೀವಿಯ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಪುಟ್ಟವೀರ, ಚನ್ನವೀರ ಸಹ, ಮೃತಪಟ್ಟ ಸದರೀ ಸಂಜೀವಿ ಗಂಡನ ಸಹೋದರರು ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ಸ್ಥಳದ ಸದರೀ ಪುಟ್ಟವೀರ, ಚನ್ನವೀರ ಸಹ ಚಾಮರಾಜನಗರ ತಾಲ್ಲೂಕು ಅಮಚವಾಡಿ ವಾಸಸ್ಥಳಾಗಿ ಮೃತ ಪಟ್ಟ ಸಂಜೀವಿಯ ಜಿಂದಗಿ ಬಗ್ಯಾಗಿ ಬರತಕ್ಕ 126—3—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟವೀರ, ಚನ್ನವೀರ ಇವರ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂಜೀವಿಯ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 491.

ಮೃತಪಟ್ಟ ರಾಜಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಮುದ್ದೂರಮ್ಮ, ಮೃತಪಟ್ಟ ಸದರೀ ರಾಜಂಣನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಮಂಡೀ ಮೊಹಲ್ಲಾ ಸ್ಥಳದ ಸದರೀ ಮುದ್ದೂರಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ರಾಜಂಣನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮುದ್ದೂರಮ್ಮನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಜಂಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 503.

ಮೃತಪಟ್ಟ ಚನ್ನಬಸವಕಟ್ಟಿ, ಸುಬ್ಬಕಟ್ಟಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಚನ್ನಬಸವಕಟ್ಟಿ, ಮೃತಪಟ್ಟ ಸದರೀ ಚನ್ನಬಸವಕಟ್ಟಿ, ಸುಬ್ಬಕಟ್ಟಿಗೆ ಮಗ, ತಮ್ಮ ಅಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ತಾಲ್ಲೂಕು ಸೂರಹಳ್ಳಿ ಸ್ಥಳದ ಚನ್ನಬಸವಕಟ್ಟಿಯು ಸದರೀ ವಾಸಸ್ಥನಾಗಿ ಮೃತಪಟ್ಟ ಚನ್ನಬಸವಕಟ್ಟಿ, ಸುಬ್ಬಕಟ್ಟಿ ಜೆಂದಗಿ ಬಗ್ಯಾಗಿ ಬರತಕ್ಕ 370 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಚನ್ನಬಸವಕಟ್ಟಿಯ ಅರ್ಜೀಯನ್ನು 1884ನೇ ಇಸವಿ ಡಿಸಂಬರು ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಬಸವಕಟ್ಟಿ, ಸುಬ್ಬಕಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 504.

ಮೃತಪಟ್ಟ ಮುಲ್ಲಕಟ್ಟಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಚನ್ನಬಸವಕಟ್ಟಿಯು, ಮೃತಪಟ್ಟ ಸದರೀ ಮುಲ್ಲಕಟ್ಟಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ತಾಲ್ಲೂಕು ಸೂರಹಳ್ಳಿ ಸ್ಥಳದ ಸದರೀ ಚನ್ನಬಸವಕಟ್ಟಿಯು ಸದರೀ ವಾಸಸ್ಥನಾಗಿ ಮೃತಪಟ್ಟ ಚನ್ನಬಸವಕಟ್ಟಿಯ ಜೆಂದಗಿಬಗ್ಯಾಗಿ ಬರತಕ್ಕ 210 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚನ್ನಬಸವಕಟ್ಟಿಯ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುಲ್ಲಕಟ್ಟಿಯು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 507.

ಮೃತಪಟ್ಟ ಸುಬ್ಬಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಭರಮಯ್ಯ, ಮೃತಪಟ್ಟ ಸದರೀ ಸುಬ್ಬಂಣನಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯದ ಸ್ಥಳದ ಸದರೀ ಭರಮಯ್ಯನು ಸದರೀ ವಾಸಸ್ಥನಾಗಿ ಮೃತಪಟ್ಟ ಸುಬ್ಬಂಣನ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಭರಮಯ್ಯನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಂಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 513.

ಮೃತಪಟ್ಟ ವೀರಭದ್ರಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೀರತ್ತಪ್ಪ, ಮೃತಪಟ್ಟ ಸದರೀ ವೀರಭದ್ರಪ್ಪನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಳಂದೂರು ತಾಲ್ಲೂಕು ಹೊನ್ನೂರು ಸ್ಥಳದ ಸದರೀ ವೀರತ್ತಪ್ಪನು ಸದರೀ ವಾಸಸ್ಥನಾಗಿ ಮೃತಪಟ್ಟ ವೀರಭದ್ರಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೀರತ್ತಪ್ಪನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರಭದ್ರಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ನವಂಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ಮುದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 30ನೇ ಅಕ್ಟೋಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಯಡತೊರೆ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಜೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ 1877ನೇ ಇಸವಿ ಮೂರನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದನ್ನ ನಾಶಪಡಿಸಲ್ಪಡುತ್ತೆ.

ನಂಬರ್ 9.

ದಸ್ತಾವೇಜು ನಂಬರು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿದ ತಾರೀಖು.	ದಸ್ತಾವೇಜು ಬರದು ಕೊಟ್ಟವನ ಹೆಸರು.	ದಸ್ತಾವೇಜು ಬರಸಿ ಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.
32 / 1882—83	7—4—82.	7—4—82	ಯೆಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ದೇವಪ್ಪ ಗೌಡನ ದ್ಯಾವೇಗೌಡನ ಹೆಂಡತಿ ಜರ್ಮಿನಿಂದ ಜೀವಿಸುವ ವಕ್ಕಲಿಗರ ಜಾತಿ ದೊಡ್ಡಿ	ಯಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ವಕ್ಕಲಿಗರ ಜಾತಿ ಪೆರಾಯಿತು ಈಸಬಿನ ಮರಿಗೌಡ	100 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 3ನೇ ಅಕ್ಟೋಬರ್ 1884.

ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಸರ್ಕಾರೀ ಬಂಜರ್ ಜಂಗಲ್ ತಾಕು, ಕಾಫೀ ಸಾಗುವಳಿಗಾಗಿ ಕಾಯಂ ದರಕ್ಕೆ ಕೊಟ್ಟೊಡ್ಡಿ ಯಸ್ಟೇಟಿನ ಮೆ॥ ಯಫ್. ಎಸ್. ಹೇಯವರಿಂದ ದರಖಾಸ್ತು ಮಾಡಲ್ಪಟ್ಟಿರುವದರಿಂದ, 1884ನೇ ಇಸವಿ ಡಿಸಂಬರ್ 1ನೇ ಮರ್ಕುಮಿನಲ್ಲಿ ಕೊಪ್ಪ ತಾಲ್ಲೂಕು ಅಮಲ್ ದಾರ್ರ ರೂಬರೂ ಹರಿಹರಪುರದ ಮೊಕ್ಕಾಮಿನಲ್ಲಿ, ಸದರೀ ತಾಕಿಗೆ ಐಯಿಂದ ಗೊತ್ತು ಮಾಡಲ್ಪಡಬಹುದಾದ ಕಂದಾಯ ತೆರುವ ಬಗ್ಯೂ ಮತ್ತು ಆವಶ್ಯಕವಾಗಿರಬಹುದಾದ ಯಾವದಾದರೂ ಮೊಗ್ಗ ಮತ್ತು ಜಲಾಧಾರ ವಗೈರೇ ಹಕ್ಕುಗಳಿಗೆ ವಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪಡೆಯುವ ಚಡ ದರಖಾಸ್ತುದಾರನು ಕ್ರಯದ ಮೊಬಲಗ್ ಫೈಕೀ ಶೇಕಡಾ 25ರ ಪ್ರಕಾರ ಆಗುವ ಮೊಬಲಗನ್ನು ಹರಾಜ್ ಕೈದಾದ ಕೂಡ್ಲೆ ಡಿಪಾಜಿಟ್ ಯಿಡಲ್ಪಟ್ಟು ಬಾಕೀ ಮೊಬಲಗು ಆ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು; ಹಾಗೆ ಪಾವತೀ ಮಾಡದೆ ತಪ್ಪಿದಲ್ಲಿ ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.